# ಬಡಾಯಿ ಮಾತಿಗೆ ತೆತ್ತ ದಂಡ



■ **ಅರುಣ್ ಕಿಲ್ಲೂರು**
ಕಲೆ: ಸಂತೋಷ್ ಸಸಿಹಿತ್ಲು

ಹರಿಪುರ ಎನ್ನುವ ಪುಟ್ಟ ಹಳ್ಳಿಯಲ್ಲಿ ಸೋಮ ಎನ್ನುವ ಬಾಲಕ ಇದ್ದನು. ಸ್ವಭಾವತಃ ಆತ ಮಾತಿನ ಮಲ್ಲನಾಗಿದ್ದ. ಅವನು ತನ್ನ ಬಗ್ಗೆ ಜಂಬ ಕೊಚ್ಚಿಕೊಳ್ಳುವುದನ್ನು ರೂಢಿಸಿಕೊಂಡಿದ್ದನು.

ಸೋಮ ಆಗಾಗ ಯಾವುದಾದರೂ ಒಂದು ಸಾಹಸದ ಕಥೆಯನ್ನು ಗೆಳೆಯರ ಕಣ್ಣಿಗೆ ಕಟ್ಟುವಂತೆ ಹೇಳಿ ಅವರ ಮಧ್ಯೆ ದೊಡ್ಡ ಮನುಷ್ಯನಂತೆ ಕಾಣಲು ಯತ್ನಿಸುತ್ತಿದ್ದನು. ಕೆಲವೊಮ್ಮೆ ಕಾಡಿಗೆ ಹೋಗಿ ಹುಲಿ, ಕಾಡು ಕೋಣಗಳಿದ್ದ ಕೆರೆಯಲ್ಲಿ ಗಂಟೆಗಟ್ಟಲೆ ಈಜುತ್ತಿದ್ದುದ್ದಾಗಿ ಜಂಬ ಕೊಚ್ಚಿಕೊಳ್ಳುತ್ತಿದ್ದನು. ಪ್ರತಿನಿತ್ಯ ವಿವಿಧ ಕಥೆಗಳನ್ನು ಕಟ್ಟಿ ಹೇಳುತ್ತಿದ್ದ ಸೋಮನ ಬಗ್ಗೆ ಸಹಪಾಠಿಗಳು ವಿಶೇಷವಾಗಿ ನೋಡಲು ಆರಂಭಿಸಿದರು. ಸೋಮನನ್ನು ಅವರು ಒಬ್ಬ ದೊಡ್ಡ ಸಾಹಸಿ ಎನ್ನುವಂತೆ ನೋಡತೊಡಗಿದರು.

ಸೋಮ ಇದ್ದ ಹಳ್ಳಿಯಲ್ಲಿ ಒಂದು ದಿನ ದನ ಮೇಯಿಸಲು ಹೋದ ರಾಮ ಎನ್ನುವ ಬಾಲಕ ಕೆರೆಯಲ್ಲಿ ಮುಳುಗಿದ. ವಯಸ್ಸಿನಲ್ಲಿ ಕಿರಿಯನಾದ ರಾಮನ ಸಹಪಾಠಿಗಳು ಸೋಮ ಓದುತ್ತಿದ್ದ ಶಾಲೆಯಲ್ಲಿ ಓದುತ್ತಿದ್ದರು. ಸೋಮ ತಾನು ಒಳ್ಳೆಯ ಈಜುಪಟು ಎಂದು ಹೇಳುತ್ತಿದ್ದ ಕಾರಣ, ರಾಮನ ಸಹಪಾಠಿಗಳು ಸೋಮ ಸಹಾಯ ಮಾಡಬಹುದು ಎಂದು ಕೆರೆಯ ಸಮೀಪ ಇದ್ದ ಸೋಮನ ಬಳಿ ಓಡೋಡಿ ಬಂದರು.

‘ಸೋಮಣ್ಣ, ಸೋಮಣ್ಣ... ರಾಮನು ದನ ಮೇಯಿಸುವ ವೇಳೆ ಕೆರೆಯಲ್ಲಿ ಕಾಲು ತೊಳೆಯಲು ಹೋಗಿ ಜಾರಿ ಬಿದ್ದಿದ್ದಾನೆ. ಅವನನ್ನು ನೀನು ಬೇಗನೆ ಕಾಪಾಡಬೇಕು’ ಎಂದು ಸೋಮನಲ್ಲಿ ವಿನಂತಿಸಿದರು.

ಈ ವಿಚಾರ ತಿಳಿದು ಸೋಮನಿಗೆ ನೆಲವೇ ಕುಸಿದ ಹಾಗೆ ಆಯಿತು. ಅವನು ಸಹಪಾಠಿಗಳ ನಡುವೆ ದೊಡ್ಡ ಜನ ಆಗಲು ಈಜಲು ಬರುತ್ತದೆ ಎಂದು ಸುಳ್ಳು ಹೇಳಿದ್ದ. ಆದರೆ ಈಗ ಅವನು ಪ್ರಾಣ ಸಂಕಟಕ್ಕೆ ಸಿಲುಕಿದ್ದ.

‘ನನಗೆ ಮೈ ಹುಷಾರಿಲ್ಲ. ಈಗ ಆಗದು’ ಎಂದು ಸೋಮ ತಪ್ಪಿಸಿಕೊಳ್ಳುವ ಯತ್ನ ಮಾಡಿದ. ಆದರೆ ರಾಮನ ಸಹಪಾಠಿಗಳು ಸೋಮನ ಮಾತನ್ನು ಕೇಳದೆ ಅವನನ್ನು ಕೆರೆಗೆ ತಳ್ಳಿಯೇ ಬಿಟ್ಟರು.

ಈಜು ಬಾರದೆ ಸೋಮ ಕೆರೆಯೊಳಗೆ ಮುಳುಗಿ ಒದ್ದಾಡತೊಡಗಿದ. ತುಂಬ ಹೊತ್ತು ಆದರೂ ಸೋಮ ಮೇಲೆ ಬರಲಿಲ್ಲ. ರಾಮನ ಸಹಪಾಠಿಗಳು ಸೋಮನು ರಾಮನನ್ನು ಕೆರೆಯ ಆಳದಲ್ಲಿ ಹುಡುಕುತ್ತಿರಬೇಕು ಎಂದು ಭಾವಿಸಿದರು.

ಇದೇ ವೇಳೆ ದಾರಿಹೋಕರು ವಿಷಯ ತಿಳಿದು ಕೆರೆಯಲ್ಲಿ ಮುಳುಗಿದ ರಾಮನನ್ನು ಮೇಲೆತ್ತಿದರು. ಆಗ ರಾಮನ ಸಹಪಾಠಿಗಳು ರಾಮನ ರಕ್ಷಣೆ ಮಾಡಲು ಕೆರೆಗೆ ಇಳಿದ ಸೋಮನು ಇನ್ನೂ ಮೇಲಕ್ಕೆ ಬಂದಿಲ್ಲ ಎಂದು ತಿಳಿಸಿದರು.

ಸ್ವಲ್ಪ ಹೊತ್ತು ಗೊಂದಲದ ವಾತಾವರಣ ಸೃಷ್ಟಿಯಾಯಿತು. ಸಹಾಯಹಸ್ತ ಚಾಚಿದ ದಾರಿಹೋಕರು ಮತ್ತೊಮ್ಮೆ ಕೆರೆಗೆ ಹಾರಿ ಸೋಮನನ್ನು ಹುಡುಕುವ ಯತ್ನ ಮಾಡಿದರು. ಆದರೆ ಸೋಮ ಪತ್ತೆಯಾಗಲಿಲ್ಲ. ತುಂಬಾ ಹೊತ್ತಿನ ಹುಡುಕಾಟದ ಬಳಿಕ ಸೋಮನ ಮೃತದೇಹ ಕೆರೆಯ ಕೆಸರಿನಲ್ಲಿ ಪತ್ತೆಯಾಯಿತು. ಈಜು ಬಾರದ ಸೋಮ ತನ್ನ ಸುಳ್ಳು ಮಾತಿನಿಂದ ಕೆಸರಿನಲ್ಲಿ ಸಿಲುಕಿ ಪ್ರಾಣ ಕಳೆದುಕೊಂಡ.

ಸೋಮನ ಬಡಾಯಿ ಮಾತಿನಿಂದ ಈ ರೀತಿ ಅನಾಹುತ ಆಯಿತಲ್ಲಾ ಎಂದು ಹಳ್ಳಿಯ ಜನರು ಮರುಗಿದರು. ನಮಗೆ ಗೊತ್ತಿಲ್ಲದ ವಿಷಯದಲ್ಲಿ ಪಾಂಡಿತ್ಯ ತೋರುವುದು ಅಪಾಯಕಾರಿ ಆಗಬಲ್ಲದು ಎನ್ನುವುದನ್ನು ಸೋಮನ ಸಾವು ಸಾರಿ ಹೇಳಿತು. ■

## ಕುಂಚ ಪ್ರಪಂಚ





**ಹೃದಾನ್ ಕೆ.ಎಚ್.**
ಯುಕೆಜಿ, ಸುದಾನ ರೆಸಿಡೆನ್ಶಿಯಲ್ ಸ್ಕೂಲ್, ಪುತ್ತೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in